ನರಸಿಂಹರೆಡ್ಡಿ
ಕಲೆ: ಗಣೇಶ ಆಚಾರ್ಯ

# ಮಹಿಳೆಯ ಪತ್ರ ರಹಸ್ಯ

ಕುಂತಲ ರಾಜ್ಯದ ಮಹಾರಾಜ ವಿಷ್ಣುಶರ್ಮನಿಗೆ ದೊಡ್ಡ ಸಮಸ್ಯೆ ಎದುರಾಯಿತು. ರಾಜ್ಯದಲ್ಲಿ ನೀರಿನ ಬರ ಹೆಚ್ಚಾಯಿತು. ಪಕ್ಕದ ಗಂಗ ರಾಜ್ಯದ ಜೊತೆ ಗಡಿ ಸಮಸ್ಯೆ ಕೂಡ ಇತ್ತು. ಕುಂತಲ ರಾಜ್ಯವು ಗಂಗ ರಾಜ್ಯದ ಕೆಳಗಡೆ, ಇಳಿಜಾರಿನಲ್ಲಿ ಬರುತ್ತಿತ್ತು. ಹೊಳೆಗಳ ನೀರು ಬಂದರೆ, ಗಂಗ ರಾಜ್ಯದಿಂದಲೇ ಹರಿದು ಬರಬೇಕು. ಆದರೆ, ಗಡಿ ಸಮಸ್ಯೆಯಿಂದಾಗಿ ಗಂಗ ರಾಜ್ಯದ ದೊರೆ ಚಂದ್ರವರ್ಮನು ಕುಂತಲ ರಾಜ್ಯಕ್ಕೆ ಹರಿಯುವ ನೀರನ್ನು ತಡೆಯಲು ಅಣೆಕಟ್ಟುಗಳನ್ನು ನಿರ್ಮಾಣ ಮಾಡಿಸಿದ್ದ. ಇದರಿಂದಾಗಿ ಒಂದು ಹನಿ ನೀರೂ ಕುಂತಲ ರಾಜ್ಯಕ್ಕೆ ಬರದಂತಾಗಿತ್ತು.

ಎಷ್ಟು ಬಾರಿ ರಾಜಿಗೆ ಕರೆದರೂ ಗಂಗ ರಾಜ ಚಂದ್ರವರ್ಮ ಬಂದಿರಲಿಲ್ಲ. ವಿಷ್ಣುಶರ್ಮನಿಗೆ ಇದೇ ದೊಡ್ಡ ಸಮಸ್ಯೆಯಾಯಿತು. ರಾಜಸಭೆಯಲ್ಲಿ ಯಾರಿಂದಲೂ ಈ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ರಾಜ್ಯದ ಜಲ ಮತ್ತು ಗಡಿ ಸಮಸ್ಯೆಗೆ ಪರಿಹಾರ ಸೂಚಿಸಿದವರಿಗೆ ಬಹುಮಾನ ನೀಡಲಾಗುವುದು ಎಂದು ಡಂಗುರ ಸಾರಿಸಿದ. ಯಾರೂ ಮುಂದೆ ಬರಲಿಲ್ಲ.

ನೀರಿಲ್ಲದೇ ಊರ ಜನ–ಜಾನುವಾರು ಸಾಯುವ ಮೊದಲು ಆ ಗಂಗ ರಾಜನಿಗೆ ಶರಣಾಗಬೇಕು ಎಂಬ ಆಲೋಚನೆಯಲ್ಲಿ ವಿಷ್ಣುಶರ್ಮ ಇರುವಾಗ, ರಾಜಸಭೆಗೆ ಒಬ್ಬ ಮಹಿಳೆ ಬಂದಳು. ತಾನು ಈ ಸಮಸ್ಯೆಗೆ ಪರಿಹಾರ ನೀಡುವುದಾಗಿ ಹೇಳಿದಳು. ವಿಷ್ಣುಶರ್ಮನಿಗೆ ಆಶ್ಚರ್ಯ ಮತ್ತು ಸಂತಸ ಎರಡೂ ಆಯಿತು.

ಮಹಿಳೆಯು, 'ನನ್ನನ್ನು ಗಂಗ ರಾಜರ ರಾಜಸಭೆಗೆ ದೂತೆಯನ್ನಾಗಿ ಕಳಿಸಿ. ನಾನು ಈ ಸಮಸ್ಯೆಗೆ ಪರಿಹಾರ ತರುತ್ತೇನೆ' ಎಂದಳು. ವಿಷ್ಣುಶರ್ಮ, 'ಯಾವ ಕಾರಣವನ್ನು ಮುಂದಿಟ್ಟರೂ ಚಂದ್ರವರ್ಮ ರಾಜಿಗೆ ಬಂದಿಲ್ಲ. ಮಹಿಳೆಯಾದ ನೀನು ಹೇಗೆ ಈ ಸಮಸ್ಯೆಗೆ ಪರಿಹಾರ ತರುವೆ ಎಂದು ಅರ್ಥವಾಗುತ್ತಿಲ್ಲ. ಆದರೆ, ನಮ್ಮ ಪ್ರಜೆಗಳಲ್ಲಿ ನೀನೊಬ್ಬಳು ಪರಿಹಾರ ನೀಡುತ್ತೇನೆ ಎಂದು ಮುಂದೆ ಬಂದೆ. ನಿನ್ನ ಧೈರ್ಯಕ್ಕೆ ಮೆಚ್ಚಿ ಅನುಮತಿ ನೀಡುತ್ತಿದ್ದೇನೆ' ಎಂದು ಹೇಳಿದ.

ಇಬ್ಬರು ರಾಜಭಟರನ್ನು ಜೊತೆ ಮಾಡಿ ಆ ಮಹಿಳೆಯನ್ನು ಗಂಗ ರಾಜ್ಯಕ್ಕೆ ಕಳಿಸಿದ. ರಾಜಸಭೆಗೆ ಆಗಮಿಸಿದ ಮಹಿಳೆಯನ್ನು ಕಂಡು ಅಚ್ಚರಿಗೊಂಡ ಚಂದ್ರವರ್ಮ, 'ಏನು ಸಮಾಚಾರ?' ಎಂದು ಕೇಳಿದ. ಮಹಿಳೆ ತನ್ನೊಂದಿಗೆ ತಂದಿದ್ದ ಒಂದು ಪತ್ರವನ್ನು ರಾಜನಿಗೆ ಕೊಟ್ಟಳು. ಅದನ್ನು ಓದಿದ ತಕ್ಷಣ ಮಂತ್ರಿಗೆ, 'ನಮ್ಮ ರಾಜ್ಯದ ಎಲ್ಲಾ ಅಣೆಕಟ್ಟುಗಳ ನೀರನ್ನು ಕುಂತಲ ರಾಜ್ಯಕ್ಕೆ ಬಿಡಲು ಸಿದ್ಧತೆ ಮಾಡಿ, ರಾಜ್ಯದ ಗಡಿ ಸುತ್ತಲೂ ಕಾಲುವೆ ತೋಡಿ' ಎಂದು ಆದೇಶಿಸಿದ.

ಮಹಿಳೆ ಮತ್ತೆ ಕುಂತಲ ರಾಜ್ಯಕ್ಕೆ ಹಿಂದಿರುಗಿ, ವಿಷ್ಣುಶರ್ಮನಿಗೂ ಒಂದು ಪತ್ರವನ್ನು ಕೊಟ್ಟಳು. ಅದನ್ನು ಓದಿದ ವಿಷ್ಣುಶರ್ಮ ಮಂತ್ರಿಗೆ ತಕ್ಷಣ ರಾಜ್ಯದ ಗಡಿ ಸುತ್ತಲೂ ಕಾಲುವೆ ತೋಡಲು ಆದೇಶಿಸಿದ. ಎರಡು ರಾಜ್ಯಗಳ ಗಡಿ ಕಾಲುವೆಗಳು ಸೇರಿ ಕುಂತಲ ಮತ್ತು ಗಂಗ ರಾಜ್ಯಗಳ ಸುತ್ತಲೂ ದೊಡ್ಡ ಕಾಲುವೆ ಜಾಲ ನಿರ್ಮಾಣವಾಯಿತು. ಗಂಗ ರಾಜ್ಯದಿಂದ ನೀರು ಬಿಡಲಾಯಿತು. ಕುಂತಲ ರಾಜ್ಯದ ನೀರಿನ ಸಮಸ್ಯೆ ನೀಗಿತು. ಚಂದ್ರವರ್ಮ, ವಿಷ್ಣುಶರ್ಮ ರಾಜಿಯಾದರು. ಯುದ್ಧ ಕಾಲದಲ್ಲಿ ಪರಸ್ಪರ ನೆರವಾಗುವ ಒಪ್ಪಂದವಾಯಿತು.